ಓ.ಎಸ್. ನಂಃ 170/2024

**ಡಿ.ಡಬ್ಲ್ಯೂಃ 1**

**ದಿನಾಂಕ 07.03.2026 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ ಎಂ.ಸಿ.ಎಸ್ ವಕೀಲರಿಂದಃ**

1. ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಸಹಿಯನ್ನು ಹಾಗೂ ಪ್ರತಿವಾದ ಪತ್ರದಲ್ಲಿರುವ ಸಹಿಯನ್ನು ಸಾಕ್ಷಿಗೆ ತೋರಿಸಿದ್ದು, ಅದು ತಮ್ಮದೇ ಸಹಿ ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ.6 ಮತ್ತು 7 ರಲ್ಲಿರುವ ಸಹಿಗಳನ್ನು ಸಾಕ್ಷಿಗೆ ತೋರಿಸಿದ್ದು, ಅದು ತಮ್ಮದೇ ಸಹಿಗಳು ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಿಪಿ.1 ರಲ್ಲಿರುವ ನಿಪಿ.1(ಎ) ಮತ್ತು ನಿಪಿ.1(ಬಿ) ಎಂದು ಗುರುತಿಸಲಾಗಿರುವ ಸಹಿಗಳನ್ನು ಸಾಕ್ಷಿಗೆ ತೋರಿಸಿದ್ದು, ಅದು ತಮ್ಮದೇ ಸಹಿಗಳು ಎಂದು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

2. ಸುಮಾರು 20 ವರ್ಷಗಳಿಂದ ನನಗೆ ವಾದಿಯ ಪರಿಚಯವಿದೆ. ನಾನು ವಾದಿಯಿಂದ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ವಾದಿಯಿಂದ 10,000/- ರೂಪಾಯಿ ಸಾಲವನ್ನು ಪಡೆದಿದ್ದು, ಅದನ್ನು ಬಡ್ಡಿ ಸಮೇತ ವಾದಿಗೆ ಮರುಪಾವತಿಸಿರುತ್ತೇನೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ವಾದಿಯಿಂದ ಸಾಲದ ಹಣವನ್ನು ಪಡೆದು ನಾನು ನಿಪಿ.1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಾದಿ ನನಗೆ ಕೇವಲ 10,000/- ರೂಪಾಯಿ ಸಾಲವನ್ನು ನೀಡಿದ್ದು, ಅದನ್ನು ನಾನು ಮರುಪಾವತಿಸಿದರು ಸಹ ಈಗ ಒಂದು ಲಕ್ಷ ರೂಪಾಯಿ ನಾನು ವಾದಿಗೆ ಕೊಡಬೇಕು ಎಂದು ಈ ಸುಳ್ಳು ದಾವೆಯನ್ನು ಹೂಡಿರುತ್ತಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

3. ನಿಪಿ.2 ಮತ್ತು 3 ರ ನೋಟಿಸುಗಳಿಗೆ ನಾನು ಪ್ರತ್ಯುತ್ತರ ನೋಟಿಸುಗಳನ್ನು ನೀಡಿರುವುದಿಲ್ಲ. ದಿನಾಂಕ 25.08.2023 ರಂದು ನಾನು ವಾದಿಯಿಂದ ಒಂದು ಲಕ್ಷ ರೂಪಾಯಿ ಸಾಲವನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈಗ ಹತ್ತು ವರ್ಷಗಳಿಂದ ನನ್ನ ಮತ್ತು ವಾದಿಯ ಮಧ್ಯೆ ಯಾವುದೇ

ವ್ಯವಹಾರವಾಗಿರುವುದಿಲ್ಲ ಎಂದು ಸ್ವತಃ ನುಡಿದಿರುತ್ತಾರೆ. ನಾನು ವಾದಿಯಿಂದ ಒಂದು ಲಕ್ಷ ರೂಪಾಯಿ ಸಾಲದ ಹಣವನ್ನು ಪಡೆದು ನಿಪಿ.1 ರ ದಾಖಲೆಯನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

4. ನಾನು ವಾದಿಗೆ 10,000/- ರೂಪಾಯಿ ಸಾಲವನ್ನು ಮರುಪಾವತಿಸಿದ ಬಗ್ಗೆ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ. ಸಾಕ್ಷಿಯು ಮುಂದುವರೆದು ವಾದಿಯು ಸಣ್ಣ ಮೊತ್ತದ ಸಾಲವನ್ನು ಪಡೆದು, ಪ್ರತಿದಿನದ ಕಂತಿನಲ್ಲಿ ಸಾಲವನ್ನು ವಾಪಸ್ಸು ಪಡೆಯುತ್ತಿದ್ದ ಕಾರಣ ನನ್ನ ಬಳಿ ವಾದಿಗೆ ಸಾಲವನ್ನು ಮರುಪಾವತಿಸಿದ ಬಗ್ಗೆ ಯಾವುದೇ ದಾಖಲೆಗಳು ಇಲ್ಲ ಎಂದು ಸ್ವತಃ ನುಡಿದಿರುತ್ತಾರೆ. ನಾನು ವಾದಿಯಿಂದ ಒಂದು ಲಕ್ಷ ರೂಪಾಯಿ ಸಾಲದ ಹಣವನ್ನು ಪಡೆದಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**